**FEBRUARY 2026** ISSUE 03 VOL.10

# E - STEERT VOICE



**ವಿಜ್ಞಾನ, ಸಮಾಜ ಮತ್ತು ವಿಕಾಸ್ ಭಾರತ್ ಸ್ಫೂರ್ತಿ**

ಭಾರತವು ಇದೇ ವರುಷ ಫೆಬ್ರವರಿ ೨೮ರಂದು "ವಿಜ್ಞಾನದಲ್ಲಿ ಮಹಿಳೆಯರು: ವಿಕಸಿತ್ ಭಾರತದ ವೇಗವರ್ಧನೆ" ಎಂಬ ಪ್ರಬಲ ಮತ್ತು ಸಮಯೋಚಿತ ವಿಷಯದೊಂದಿಗೆ ರಾಷ್ಟ್ರೀಯ ವಿಜ್ಞಾನ ದಿನವನ್ನು ಆಚರಿಸಿತು. ಈ ಸಂಭ್ರಮವು ಔಪಚಾರಿಕ ಸ್ಮರಣೆಗಿಂತ ವಿಶೇಷವೇ ಸರಿ. ಇದು ವೈಜ್ಞಾನಿಕ ಮನೋಭಾವ, ನಾವೀನ್ಯತೆ ಮತ್ತು ಅಂತರ್ಗತ ರಾಷ್ಟ್ರೀಯ ಅಭಿವೃದ್ಧಿಗೆ ಭಾರತದ ಬದ್ಧತೆಯನ್ನು ಪುನರುಚ್ಚರಿಸುತ್ತದೆ.

ರಾಷ್ಟ್ರೀಯ ವಿಜ್ಞಾನ ದಿನವನ್ನು ೧೯೨೮, ಫೆಬ್ರವರಿ ೨೮ರಂದು ಪ್ರಸಿದ್ಧ ಭಾರತೀಯ ಭೌತಶಾಸ್ತ್ರಜ್ಞ ಸರ್ ಚಂದ್ರಶೇಖರ ವೆಂಕಟರಾಮನ್ ಅವರ 'ರಾಮನ್ ಪರಿಣಾಮ'ದ ಐತಿಹಾಸಿಕ ಆವಿಷ್ಕಾರವನ್ನು ಸೂಚಿಸುತ್ತದೆ. ಭೌತಶಾಸ್ತ್ರಕ್ಕೆ ತಾವು ನೀಡಿದ ಈ ಮಹತ್ವದ ಕೊಡುಗೆ ಅವರಿಗೆ ೧೯೩೦ ರಲ್ಲಿ ಭೌತಶಾಸ್ತ್ರದಲ್ಲಿ ನೊಬೆಲ್ ಪ್ರಶಸ್ತಿ ಲಭಿಸಿತು. ಇದು ಭಾರತವನ್ನು ಜಾಗತಿಕ ವೈಜ್ಞಾನಿಕ ನಕ್ಷೆಯಲ್ಲಿ ದೃಢವಾಗಿ ಗುರಿತಿಸುವಂತಾಯಿತು. ಈ ಸಾಧನೆಯನ್ನು ಗುರುತಿಸಿ, ಭಾರತ ಸರಕಾರವು ೧೯೮೬ರಲ್ಲಿ ಫೆಬ್ರವರಿ ೨೮ಅನ್ನು ರಾಷ್ಟ್ರೀಯ ವಿಜ್ಞಾನ ದಿನವೆಂದು ಘೋಷಿಸಿ ಮರುವರ್ಷವೇ ಅಂದರೆ ೧೯೮೭ ರಲ್ಲಿ ಮೊದಲ ಆಚರಣೆಯನ್ನು ಹಮ್ಮಿಕೊಂಡಿತು.

ಕಾಲಗಳು ಉರುಳಿದಂತೆ ರಾಷ್ಟ್ರೀಯ ವಿಜ್ಞಾನ ದಿನದ ಮಹತ್ವವನ್ನು ಇನ್ನೂ ಅಧಿಕವಾಗಿ ಕಂಡುಕೊಂಡಿದೆ. ಹವಾಮಾನ ಬದಲಾವಣೆ, ಆರೋಗ್ಯ ಸವಾಲುಗಳು, ಡಿಜಿಟಲ್ ಪರಿವರ್ತನೆ ಮತ್ತು ತಾಂತ್ರಿಕ ಅಡೆತಡೆಗಳಿಂದ ವ್ಯಾಖ್ಯಾನಿಸಲ್ಪಟ್ಟ ಯುಗದಲ್ಲಿ, ಪರಿಹಾರಗಳನ್ನು ರೂಪಿಸುವಲ್ಲಿ ವಿಜ್ಞಾನವು ನಿರ್ಣಾಯಕ ಪಾತ್ರ ವಹಿಸುತ್ತದೆ. ೨೦೨೬ರ ಥೀಮ್ ವಿಜ್ಞಾನದಲ್ಲಿ ಮಹಿಳೆಯರನ್ನು ಸರಿಯಾಗಿ ಮುನ್ನೆಲೆಗೆ ತರುತ್ತದೆ, ಅವರ ಕೊಡುಗೆಗಳನ್ನು ಅಂಗೀಕರಿಸುತ್ತದೆ ಮತ್ತು ರಚನಾತ್ಮಕ ಅಡೆತಡೆಗಳನ್ನು ತೆಗೆದುಹಾಕುವ ಮತ್ತು ಸಂಶೋಧನೆ, ನಾವೀನ್ಯತೆ ಮತ್ತು ನಾಯಕತ್ವದಲ್ಲಿ ಸಮಾನ ಅವಕಾಶಗಳನ್ನು ಖಚಿತಪಡಿಸಿಕೊಳ್ಳುವ ಅಗತ್ಯವನ್ನು ಎತ್ತಿ ತೋರಿಸುತ್ತದೆ.

ದೇಶಾದ್ಯಂತ, ಶಿಕ್ಷಣ ಸಂಸ್ಥೆಗಳು, ಸಂಶೋಧನಾ ಪ್ರಯೋಗಾಲಯಗಳು ಮತ್ತು ವೈಜ್ಞಾನಿಕ ಸಂಸ್ಥೆಗಳು ಪ್ರದರ್ಶನ, ಉಪನ್ಯಾಸ, ರಸಪ್ರಶ್ನೆ, ಭಿತ್ತಿಪತ್ರ ತಯಾರಿಕಾ ಸ್ಪರ್ಧೆ ಮತ್ತು ಜಾಗೃತಿ ಕಾರ್ಯಕ್ರಮಗಳೊಂದಿಗೆ ಈ ದಿನವನ್ನು ಆಚರಿಸುತ್ತವೆ. ಈ ಚಟುವಟಿಕೆಗಳು ಒಂದು ಅಗತ್ಯ ಸಂದೇಶವನ್ನು ಬಲಪಡಿಸುತ್ತವೆ: ಪ್ರಯೋಗಾಲಯಗಳು ಅಥವಾ ಪಠ್ಯಪುಸ್ಥಕಗಳಿಗೆ ಮಾತ್ರ ವಿಜ್ಞಾನ ಸೀಮಿತವಾಗಿಲ್ಲ; ಇದು ದೈನಂದಿನ ಜೀವನ ಮತ್ತು ರಾಷ್ಟ್ರೀಯ ಪ್ರಗತಿಯಲ್ಲಿ ಆಳವಾಗಿ ಬೇರೂರಿದೆ.

ಈ ಆಚರಣೆಯು ಭಾರತೀಯ ಸಂವಿಧಾನದಲ್ಲಿ ಪ್ರತಿಷ್ಠಾಪಿಸಲಾದ ಮೌಲ್ಯಯುತ ವೈಜ್ಞಾನಿಕ ಮನೋಭಾವವನ್ನು ಪೋಷಿಸುವ ಮಹತ್ವವನ್ನು ನೆನಪಿಸುತ್ತದೆ. ವಿದ್ಯಾರ್ಥಿಗಳಲ್ಲಿ ಕುತೂಹಲ, ವಿಮರ್ಶಾತ್ಮಕ ಚಿಂತನೆ ಮತ್ತು ಸಾಕ್ಷ್ಯ ಆಧಾರಿತ ತರ್ಕವನ್ನು ಉತ್ತೇಜಿಸುವುದಲ್ಲದೆ ಸ್ಥಿತಿಸ್ಥಾಪಕತ್ವ ಮತ್ತು ಮುಂದಾಲೋಚನೆ ಸಮಾಜವನ್ನು ನಿರ್ಮಿಸಲು ಅತ್ಯಗತ್ಯವಾಗಿದೆ.

ಭಾರತವು ವಿಕಸಿತ ಭಾರತವಾಗಲು ಬಯಸುತ್ತಿರುವಾಗ, ವಿಜ್ಞಾನ ಮತ್ತು ತಂತ್ರಜ್ಞಾನವು ಈ ಪಯಣದ ಕೇಂದ್ರಬಿಂದುವಾಗಿರುತ್ತದೆ. ೨೦೨೬ರ ರಾಷ್ಟ್ರೀಯ ವಿಜ್ಞಾನ ದಿನವು ಹಿಂದಿನ ಸಾಧನೆಗಳಿಗೆ ಗೌರವ ಸಲ್ಲಿಸುವುದಲ್ಲದೆ, ವಿಜ್ಞಾನ ಶಿಕ್ಷಣದಲ್ಲಿ ಹೂಡಿಕೆ ಮಾಡಲು, ಮಹಿಳಾ ವಿಜ್ಞಾನಿಗಳನ್ನು ಸಬಲೀಕರಣಗೊಳಿಸಲು ಮತ್ತು ಮುಂದಿನ ಪೀಳಿಗೆಯ ನಾವೀನ್ಯಕಾರರಿಗೆ ಸ್ಫೂರ್ತಿ ನೀಡಲು ಕರೆ ನೀಡುತ್ತದೆ.

ವಿಜ್ಞಾನವನ್ನು ಆಚರಿಸುವಾಗ, ಭಾರತವು ತನ್ನ ಭವಿಷ್ಯವನ್ನು ಆಚರಿಸುತ್ತದೆ.

ಫಾ. ಕೆ. ಜೆ. ಜೋಸೆಫ್, ಎಸ್.ಡಿ.ಬಿ

# ಬೀದಿ ಉಪಸ್ಥಿತಿ

**ಬೊಸ್ಕೊ ನಿವಾಸ್**

ಜಾಗೃತಿ ಕಾರ್ಯಕ್ರಮ: ಫೆಬ್ರವರಿ ೪ ಮತ್ತು ೨೮ ರಂದು ಶಿವಾಜಿ ನಗರದ ಕಮರ್ಶಿಯಲ್ ಸ್ಟ್ರೀಟ್, ಚರ್ಚ್ ಸ್ಟ್ರೀಟ್ ಮತ್ತು ಬಸ್ ನಿಲ್ದಾಣಗಳಲ್ಲಿ ಸಾರ್ವಜನಿಕ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.



**ಬೊಸ್ಕೊ ನಿಲಯ**

ಫೆಬ್ರವರಿ ೫ ರಂದು ಜಾಲಿ ಮೊಹೊಲ್ಲಾದಲ್ಲಿ ಅಂಗನವಾಡಿ ಮಕ್ಕಳಿಗೆ ಒಳ್ಳೆಯ ಮತ್ತು ಕೆಟ್ಟ ಹವ್ಯಾಸಗಳ ಕುರಿತು ಜೀವನ ಕೌಶಲ್ಯ ತರಬೇತಿ ಕಾರ್ಯಕ್ರಮ ಇರಿಸಲಾಗಿತ್ತು.



**ಎ.ಆರ್.ಎಸ್.ಪಿ.**

ಫೆಬ್ರವರಿ ೧೨ ರಂದು ಮಟದಹಳ್ಳಿ ಬಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಾಲಾ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.



**ಬಸ್ ನಿಲ್ದಾಣ**

ಬಿ.ಎಂ.ಟಿ.ಸಿ. ಯ ಡಿ.ಟಿ.ಓ. ಶ್ರೀಮತಿ ನಯನಾ ಅವರನ್ನು ಸಂಸ್ಥೆಯ ಕಾರ್ಯಕಾರಿ ನಿರ್ದೇಶಕರು ಮತ್ತು ಯುವೋದಯದ ನಿರ್ದೇಶಕರು ಸನ್ಮಾನಿಸಿದರು.



**ಮಾಗಡಿ ರಸ್ತೆ**
ಫೆಬ್ರವರಿ ೯ರಂದು ವೈಯಕ್ತಿಕ ನೈರ್ಮಲ್ಯ ಮತ್ತು ಸ್ವಯಂ ಆರೈಕೆ ಕುರಿತು ಹದಿಹರೆಯದ ಬಾಲಕಿಯರ ಸಭೆಯನ್ನು ಗುರುಕುಲ ಅಂತಾರಾಷ್ಟ್ರೀಯ ಶಾಲೆಯಲ್ಲಿ ಹಮ್ಮಿಕೊಳ್ಳಲಾಯಿತು



**ಗಾಂಧಿನಗರ ಪ್ರದೇಶದ**
ಪಾಲುದಾರರ ಜಾಗೃತಿ: ಫೆಬ್ರವರಿ ೨೮ ರಂದು ಗಾಂಧಿನಗರದಲ್ಲಿ ಆಟೋ ಚಾಲಕರಿಗೆ ಮಕ್ಕಳ ರಕ್ಷಣೆ ಬಗ್ಗೆ ಜಾಗೃತಿ ಮೂಡಿಸಲಾಯಿತು.



# ಘಟಕಗಳು

**ಸಿ.ಎಸ್.ಎನ್**
ಫೆಬ್ರವರಿ ೧೭ ರಂದು ರಶಿಲ್ದಾರ್ ಬೀದಿಯಲ್ಲಿ ಅಗತ್ಯ-ಆಧಾರಿತ ಸಮೀಕ್ಷೆ ನಡೆಸಲಾಯಿತು.



**ಫೋಸ್ಟರ್ ಕೇರ್**

ಫೆಬ್ರವರಿ ೧೩ರಂದು ಬೆಂಗಳೂರು ದಕ್ಷಿಣದ ಸಿರ್ಸಿ ವೃತ್ತದ ಬಿಬಿಎಂಪಿ ಆಸ್ಪತ್ರೆಯಲ್ಲಿ ಆಶಾ ಕಾರ್ಯಕರ್ತೆಯರು ಮತ್ತು ಆಸ್ಪತ್ರೆ ಸಿಬ್ಬಂದಿ ವರ್ಗದವರಿಗೆ ಫೋಸ್ಟರ್ ಕೇರ್ ಬಗ್ಗೆ ಜಾಗೃತಿ ಮೂಡಿಸಲಾಯಿತು.



**ಆರೋಗ್ಯ ಕಾರ್ಯಕ್ರಮ**

ಫೆಬ್ರವರಿ ೨ ರಂದು ಸುಮನಹಳ್ಳಿಯ ನಾಗರಿಕರಿಗೂ ಮತ್ತು ಬೊಸ್ಕೊ ಸಂಸ್ಥೆಯಲ್ಲಿ ತರಬೇತಿ ಪಡೆಯುತ್ತಿರುವ ವಿದ್ಯಾರ್ಥಿಗಳಿಗೂ ಆರೋಗ್ಯ ಶಿಬಿರ ನಡೆಸಲಾಯಿತು.



**ಕುಟುಂಬದ ಪುನಃಸ್ಥಾಪನೆ ಮತ್ತು ನಂತರದ ಆರೈಕೆ**

ಪುನರ್ವಸತಿ ಪಡೆದ ಮಕ್ಕಳ ಕುಟುಂಬಗಳಿಗೆ ಮತ್ತು ನಂತರದ ಆರೈಕೆಯಲ್ಲಿರುವ ಮಕ್ಕಳಿಗೆ ಆಹಾರ ಕಿಟ್ ವಿತರಣೆ ಮಾಡಲಾಯಿತು.



**ವಲಸಿಗರ ಸಹಾಯವಾಣಿ**

ಫೆಬ್ರವರಿಯಲ್ಲಿ ವಲಸೆ ಬಂದ ಕುಟುಂಬಗಳಿಗೆ ಅವರ ಹಕ್ಕು ಹಾಗೂ ಅವರಿಗಾಗಿ ಇರುವ ಸರ್ಕಾರಿ ಸೌಲಭ್ಯಗಳ ಬಗ್ಗೆ ಜಾಗೃತಿ ಮೂಡಿಸಲಾಯಿತು.



**ಕ್ರಿಸ್ಪ್**
ಫೆಬ್ರವರಿ ೯ರಂದು ಮಕ್ಕಳ ಹಕ್ಕುಗಳು ಮತ್ತು ಮಕ್ಕಳ ಆರೋಗ್ಯದ ಬಗ್ಗೆ ತಾಯಂದಿರಿಗೆ ಜಾಗೃತಿ ಮೂಡಿಸಲಾಯಿತು



**ಕಾನೂನು ಸಂಘರ್ಷಕ್ಕೆ ಒಳಗಾದ ಮಕ್ಕಳ ಕಾರ್ಯಕ್ರಮ**
ಫೆಬ್ರವರಿ ೨೩ ರಂದು ಕೆ.ಜಿ. ಹಳ್ಳಿಯ ಸಗಾಯಪುರಂನಲ್ಲಿ ಕಾನೂನು ಸಂಘರ್ಷದಲ್ಲಿರುವ ಮಕ್ಕಳ ಕುರಿತು ಸಮುದಾಯ ಜಾಗೃತಿ ಕಾರ್ಯಕ್ರಮ ನಡೆಸಲಾಯಿತು.



**ಎಚ್.ಆರ್.ಡಿ**
ಫೆಬ್ರವರಿ ೧೦ ಮತ್ತು ೧೧ ರಂದು ಬೊಸ್ಕೊ ಸಂಸ್ಥೆಯಲ್ಲಿನ ಹೊಸ ಸಿಬ್ಬಂದಿಗಳನ್ನು ಬೆಂಗಳೂರು ನಗರದಲ್ಲಿನ ಎಲ್ಲಾ ಬೊಸ್ಕೊ ಕೇಂದ್ರಗಳಿಗೆ ಸಂದರ್ಶನಕ್ಕೆ ಕರೆದುಕೊಂಡು ಹೋಗಲಾಯಿತು.



**ಆರ್.ಎಂ.ಟಿ**

ಸಿ.ಎಸ್.ಆರ್. ಚಟುವಟಿಕೆಗಳು.



# ಮಕ್ಕಳ ಆರೈಕಾ ಸಂಸ್ಥೆಗಳು

**ಬೊಸ್ಕೊ ಮನೆ**
ಫೆಬ್ರವರಿ ೨೨ ರಂದು ನೆರವು ತಂಡದಿಂದ ಬೊಸ್ಕೊ ಮನೆಯ ಮಕ್ಕಳಿಗೆ ಸಮಸ್ಯೆ ಪರಿಹಾರ ಮತ್ತು ಸಂವಹನ ಕೌಶಲ್ಯಗಳ ಕುರಿತು ಜೀವನ ಕೌಶಲ್ಯ ಅಧಿವೇಶನ ನಡೆಸಲಾಯಿತು.



**ಬೊಸ್ಕೊ ವಿಕಾಸ್**
ಫೆಬ್ರವರಿ ೨೨ ರಂದು ನೆರವು ತಂಡದಿಂದ ಬೊಸ್ಕೊ ಮನೆಯ ಮಕ್ಕಳಿಗೆ ಸಮಸ್ಯೆ ಪರಿಹಾರ ಮತ್ತು ಸಂವಹನ ಕೌಶಲ್ಯಗಳ ಕುರಿತು ಜೀವನ ಕೌಶಲ್ಯ ಅಧಿವೇಶನ ನಡೆಸಲಾಯಿತು.



**ಬೊಸ್ಕೊ ರೇನ್‌ಬೋ ಹೋಮ್**
ಫೆಬ್ರವರಿ ೧೫ ರಂದು ಡಾ.ಅಬ್ರಹಾಂ ಮತ್ತು ತಂಡದಿಂದ ರೇನ್‌ಬೋ ಮಕ್ಕಳಿಗೆ ಸಾಮಾನ್ಯ ಆರೋಗ್ಯ ತಪಾಸಣೆ ನಡೆಸಲಾಯಿತು.



**ಬೊಸ್ಕೊ ಸುಮನಹಳ್ಳಿ**
ಫೆಬ್ರವರಿ ೨೮ ರಾಷ್ಟ್ರೀಯ ವಿಜ್ಞಾನ ದಿನೋತ್ಸವದ ಅಂಗವಾಗಿ ಬೊಸ್ಕೊ ಸುಮನಹಳ್ಳಿಯ ಮಕ್ಕಳಿಗೆ ರಾಷ್ಟ್ರೀಯ ವಿಜ್ಞಾನ ದಿನದ ಮಹತ್ವ ಬಗ್ಗೆ ಅಧಿವೇಶನ ನಡೆಸಲಾಯಿತು.



**ಬೊಸ್ಕೊ ಯುವಕೇಂದ್ರ**

ಫೆಬ್ರವರಿ ೧೬ ರಂದು ಬೊಸ್ಕೊ ಯುವಕೇಂದ್ರ ದ ಯುವಜನರಿಗೆ ವೃತ್ತಿ ಮಾರ್ಗದರ್ಶನದ ಕುರಿತು ಅಧಿವೇಶನ ನಡೆಸಲಾಯಿತು.



**ಬೊಸ್ಕೊ ಯುವೋದಯ**

ಫೆಬ್ರವರಿ ೧೩ ರಂದು ಬೊಸ್ಕೊ ಔಟ್ರೀಚ್ ಮತ್ತು ಸಿಸಿಐ ಸಿಬ್ಬಂದಿಗಳಿಗೆ ಜೆ.ಜೆ. ಆ್ಯಕ್ಟ್ ೨೦೧೫ ರ ಅನ್ವಯ CWC ನ ಕಾರ್ಯವಿಧಾನಗಳು ಮತ್ತು ಫಾರ್ಮ್ ಭರ್ತಿ ಕುರಿತು ತರಬೇತಿ ಕಾರ್ಯಕ್ರಮ ನಡೆಸಿಕೊಡಲಾಯಿತು.



**ಬೊಸ್ಕೊ ವಾತ್ಸಲ್ಯ ಭವನ**

ಬ್ಯೂಟಿಷಿಯನ್ ಟ್ರೇಡ್‌ನ ತರಬೇತಿದಾರರಿಂದ ಲ್ಯಾಕ್ಮೆ ಸಲೂನ್‌ಗೆ ಎಕ್ಸ್‌ಪೋಸರ್ ಭೇಟಿ



# ನಿರ್ದೇಶಕರು ಮತ್ತು ಸಾಮಾಜಿಕ ಸಜ್ಜುಗಾರರೊಂದಿಗೆ ಕಾರ್ಯಾರ್ಥ ಸಭೆ

ಫೋಸ್ಟರ್ ಕೇರ್ ಕಾರ್ಯಾರ್ಥ ಸಭೆಯನ್ನು ಫೆಬ್ರವರಿ ೧೯ರಂದು ಗೂಗಲ್ ಮೀಟ್ ಮೂಲಕ ನಡೆಸಲಾಯಿತು, ಇದರಲ್ಲಿ ನಿರ್ದೇಶಕರು, ಸಂಯೋಜಕರು ಮತ್ತು ಸಾಮಾಜಿಕ ಸಜ್ಜುಗೊಳಿಸುವವರು ಸೇರಿದಂತೆ ೩೫ ಸದಸ್ಯರು ಭಾಗವಹಿಸಿದ್ದರು.

ಮೊದಲ ಅಧಿವೇಶನದ ನೇತೃತ್ವವನ್ನು ಮಕ್ಕಳ ಭೇಟಿಗಳ ಮೇಲ್ವಿಚಾರಣೆ, ವರದಿ ಮಾಡುವ ಸ್ವರೂಪಗಳು ಮತ್ತು ಜಾಗೃತಿ ಮೂಡಿಸಲು ಅಳವಡಿಸಿಕೊಳ್ಳುವಂತಹ ಕಾರ್ಯತಂತ್ರಗಳ ಪ್ರಮುಖ ಅಂಶಗಳನ್ನು ಪ್ರಸ್ತುತಪಡಿಸಿ ಹಿಂದಿನ ಸಭೆಯ ಪುನರಾವರ್ತನೆಯನ್ನು ಬೊಸ್ಕೊ ಸಂಸ್ಥೆಯ ಕಾರ್ಯಕಾರಿ ನಿರ್ದೇಶಕರಾದ ಫಾ. ವರ್ಗೀಸ್ ಪಲ್ಲಿಪುರಂ ಅವರು ತಿಳಿಸಿಕೊಟ್ಟರು. ನಂತರ ಅವರು ಸಾಮಾಜಿಕ ಸಜ್ಜುಗೊಳಿಸುವವರ ಪರಿಶೀಲನಾಪಟ್ಟಿಯನ್ನು ಪರಿಚಯಿಸಿದರು ಮತ್ತು ವಿವರಿಸಿದರು. ಇದರಲ್ಲಿ ಮಧ್ಯಸ್ಥಗಾರರಿಗೆ ಜಾಗೃತಿ ಕಾರ್ಯಕ್ರಮಗಳನ್ನು ನಡೆಸುವುದು, ಕಚೇರಿಗೆ ಸಂಬಂಧಿಸಿದ ಕಾರ್ಯಗಳು, ಮನೆ ಭೇಟಿಗಳು, ಶಾಲಾ ಭೇಟಿಗಳು, ಮೇಲ್ವಿಚಾರಣೆ ಮತ್ತು ದಾಖಲಾತಿ, ಕಾನೂನು ಅನುಸರಣೆ ಮತ್ತು ಇತರ ನಿಯೋಜಿಸಲಾದ ಕರ್ತವ್ಯಗಳೂ ಒಳಗೊಂಡಿದ್ದವು.



ಪೋಷಕರ ಆರೈಕೆಯ ಸಂಯೋಜಕರಾದ ಶ್ರೀ. ಶಿವಮಲ್ಲು ಜಿಲ್ಲೆಗಳಾದ್ಯಂತ ಪೋಷಕರ ಆರೈಕೆ ನಿಯೋಜನೆಗಳ ಸ್ಥಿತಿಯನ್ನು ಪ್ರಸ್ತುತಪಡಿಸಿದರು. ಆರೈಕೆಯನ್ನು ಉತ್ತೇಜಿಸಲು ೧೬ ಜಿಲ್ಲೆಗಳಲ್ಲಿ ಪ್ರಕಟಣೆಗೊಂಡ ಪತ್ರಿಕಾ ವರದಿಯ ಜೊತೆಗೆ ಏಳು ತಿಂಗಳ ಅವಧಿಯಲ್ಲಿ ಒಟ್ಟು ಮಕ್ಕಳ ಆರೈಕೆ ನಿಯೋಜನೆಗಳನ್ನು ಪೂರ್ಣಗೊಳಿಸಲಾಗಿದೆ ಎಂದು ಅವರು ತಿಳಿಸಿದರು. ಕೊನೆಗೆ ದಾಖಲೆಗಳ ಸಂಯೋಜಕರಾದ ಶ್ರೀಮತಿ ನಂದಿನಿ ಎನ್. ಅವರು ಮಂಡಿಸಿದ ವಂದನೆಯೊಂದಿಗೆ ಸಭೆ ಮುಕ್ತಾಯಗೊಂಡಿತು.

## Distribution of Certificates

ಟೈಲರಿಂಗ್ ಮತ್ತು ಕಂಪ್ಯೂಟರ್ ತರಬೇತಿ ಕೋರ್ಸ್ಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದವರನ್ನು ಗೌರವಿಸಲು ಫೆಬ್ರವರಿ ೨೦ ರಂದು ಬೊಸ್ಕೊ ನಿವಾಸ್‌ನಲ್ಲಿ ಪ್ರಮಾಣಪತ್ರ ವಿತರಣಾ ಸಮಾರಂಭವನ್ನು ಆಯೋಜಿಸಲಾಗಿತ್ತು. ತರಬೇತಿ ಕಾರ್ಯಕ್ರಮ, ವೃತ್ತಿಪರ ಕೌಶಲ್ಯಗಳನ್ನು ನೀಡಲು ಮಾತ್ರವಲ್ಲದೆ ಲಿಂಗ ಸಮಾನತೆಯನ್ನು ಉತ್ತೇಜಿಸಲು ಮತ್ತು ಮಹಿಳೆಯರು ಮತ್ತು ವಿದ್ಯಾರ್ಥಿಗಳನ್ನು ಸಬಲೀಕರಣಗೊಳಿಸಲು, ಅವರು ಸ್ವಾವಲಂಬಿಗಳಾಗಲು ಮತ್ತು ಜೀವನೋಪಾಯದ ಅವಕಾಶಗಳನ್ನು ಮುಂದುವರಿಸುವಲ್ಲಿ ವಿಶ್ವಾಸ ಹೊಂದಲು ಅನುವು ಮಾಡಿಕೊಡಲು ಈ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.



ತರಬೇತುದಾರರಿಗೆ ಅವರ ಭವಿಷ್ಯದ ಪ್ರಯತ್ನಗಳಲ್ಲಿ ಬೆಂಬಲ ನೀಡುವ ಉದ್ದೇಶದಿಂದ ಹೊಸ ಕೌಶಲ್ಯ ಅಭಿವೃದ್ಧಿ ಯೋಜನೆಗಳ ಬಗ್ಗೆ ಆಗಮಿಸಿದ ಗಣ್ಯ ಅತಿಥಿಗಳು ಮಾಹಿತಿ ನೀಡಿದರು. ಇಂದಿನ ಸಾಮಾಜಿಕ-ಆರ್ಥಿಕ ಸನ್ನಿವೇಶದಲ್ಲಿ ಕೌಶಲ್ಯ ಆಧಾರಿತ ಕಲಿಕೆಯ ಮಹತ್ವವನ್ನು ಒತ್ತಿಹೇಳುತ್ತಾ, ಶಿಕ್ಷಣ ಮತ್ತು ವೃತ್ತಿಪರ ತರಬೇತಿಯ ಮೂಲಕ ಯುವಜನರನ್ನು ಸಬಲೀಕರಣಗೊಳಿಸುವಲ್ಲಿ ಡಾನ್ ಬೊಸ್ಕೊ ಸಂಸ್ಥೆಗಳ ಮಹತ್ವದ ಪಾತ್ರವನ್ನು ಅತಿಥಿಗಳು ದೃಢಪಡಿಸಿದರು.

ಬೊಸ್ಕೊ ಸಂಸ್ಥೆಯ ಕಾರ್ಯಕಾರಿ ನಿರ್ದೇಶಕರಾದ ಫಾ. ವರ್ಗೀಸ್ ಪಲ್ಲಿಪುರಂ, ಬೊಸ್ಕೊ ನಿವಾಸ್ ಕೇಂದ್ರದ ನಿರ್ದೇಶಕರಾದ ಫಾ. ದೇವರಾಜ್, ಮಹಿಳಾ ಹಕ್ಕುಗಳ ವಿಭಾಗದ ಉಪಾಧ್ಯಕ್ಷೆ ಶ್ರೀಮತಿ ಅನುಪಮಾ ಮತ್ತು ಸಮಾಜ ಕಾರ್ಯಕರ್ತರಾದ ಶೋಯೆಬ್ ಪಾಷಾರವರು ತರಬೇತಿ ಪಡೆದವರಿಗೆ ಪ್ರಮಾಣಪತ್ರಗಳನ್ನು ವಿತರಿಸಿ ಅವರ ಸಾಧನೆಗಳನ್ನು ಅಭಿನಂದಿಸಿದರು.
ತರಬೇತಿ ಪಡೆಯುವವರಿಗೆ ಕಲಿಕೆಯನ್ನು ಮುಂದುವರಿಸಲು, ಅವರ ಕೌಶಲ್ಯಗಳನ್ನು ಹೆಚ್ಚಿಸಲು ಮತ್ತು ವೈಯಕ್ತಿಕ ಮತ್ತು ವೃತ್ತಿಪರ ಬೆಳವಣಿಗೆಗೆ ಕೆಲಸ ಮಾಡಲು ಇದೊಂದು ಪ್ರೇರಣಾ ಕಾರ್ಯಕ್ರಮವಾಗಿತ್ತು. ಈ ಕಾರ್ಯಕ್ರಮದಲ್ಲಿ ಒಟ್ಟು ೨೪ ತರಬೇತುದಾರರು ತಮ್ಮ ಕೋರ್ಸನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ ಪ್ರಮಾಣಪತ್ರಗಳನ್ನು ಪಡೆದರು.

# ಬೊಸ್ಕೊ ರೇನ್‌ಬೋ ಹೋಮ್‌ನಲ್ಲಿ ಪೋಷಕರ ಸಭೆ



ರೇನ್‌ಬೋ ಹೋಮ್‌ನಲ್ಲಿ ಕಲಿಯುತ್ತಿರುವ ಮಕ್ಕಳು ಮತ್ತು ಅವರ ಪೋಷಕರು ಫೆಬ್ರವರಿ ೦೮ ರಂದು ಆಯೋಜಿಸಲಾಗಿದ್ದ ಪೋಷಕರು ಸಭೆಗೆ ಹಾಜರಾದರು. MINDS ಪ್ರಾಜೆಕ್ಟ್ನ ಶ್ರೀಮತಿ ಪ್ರಣಿತಾ, ಡಾನ್ ಬೊಸ್ಕೊ ಬ್ರೆಡ್ಸ್ ತಂಡದೊಂದಿಗೆ ಪೋಷಕರಿಗೆ ತಿಳಿವಳಿಕೆ ಮತ್ತು ಸಂವಾದಾತ್ಮಕ ಅಧಿವೇಶನವನ್ನು ನಡೆಸಿಕೊಟ್ಟರು. ಈ ಅಧಿವೇಶನವು ಮಾನಸಿಕ ಆರೋಗ್ಯ ಜಾಗೃತಿ, ಮಕ್ಕಳಲ್ಲಿ ಸಾಮಾನ್ಯ ಮಾನಸಿಕ ಆರೋಗ್ಯ ಅಸ್ವಸ್ಥತೆಗಳ ಬಗ್ಗೆ ಒಳನೋಟಗಳನ್ನು ಒದಗಿಸುವುದು, ರೋಗಲಕ್ಷಣಗಳನ್ನು ಶೀಘ್ರವಾಗಿ ಪತ್ತೆಹಚ್ಚುವುದು ಮತ್ತು ಪೋಷಕರು ಎಲ್ಲಿ ವೃತ್ತಿಪರ ಸಹಾಯವನ್ನು ಪಡೆಯಬಹುದು ಎಂಬುದರ ಕುರಿತು ಮಾರ್ಗದರ್ಶನ ನೀಡುವುದರ ಮೇಲೆ ಕೇಂದ್ರೀಕರಿಸಿತ್ತು. ಇದಲ್ಲದೆ, ವೈಯಕ್ತಿಕ ಆರೈಕೆ, ನೈರ್ಮಲ್ಯ ಮತ್ತು ಸ್ವಯಂ-ಆರೈಕೆಯ ಅಭ್ಯಾಸಗಳಿಗೆ ಒತ್ತು ನೀಡುವ ಮೂಲಕ ಮುಟ್ಟಿನ ಆರೋಗ್ಯಕ್ಕೆ ಸಂಬಂಧಿಸಿದ ಮತ್ತು ಆಗಾಗ್ಗೆ ನಿರ್ಲಕ್ಷ್ಯದ ಸಮಸ್ಯೆಗಳ ಬಗ್ಗೆಯೂ ಈ ಅಧಿವೇಶನದಲ್ಲಿ ಮಂಡಿಸಲಾಯಿತು. ಈ ಚರ್ಚೆಗಳು ಪೋಷಕರು ತಮ್ಮ ಮಕ್ಕಳ ದೈಹಿಕ ಮತ್ತು ಮಾನಸಿಕ ಯೋಗಕ್ಷೇಮದ ಬಗ್ಗೆ ಉತ್ತಮ ತಿಳುವಳಿಕೆಯನ್ನು ಪಡೆಯಲು ಸಹಾಯ ಮಾಡಿದವು.

ಈ ಸಭೆಯು ವಿವಿಧ ಮಾನಸಿಕ ಆರೋಗ್ಯ ಕಾಳಜಿಗಳ ಬಗ್ಗೆ ಜಾಗೃತಿ ಮೂಡಿಸಿತು ಮತ್ತು ಪೋಷಕರಿಗೆ ತಮ್ಮ ಮಕ್ಕಳ ಭಾವನಾತ್ಮಕ ಮತ್ತು ಮಾನಸಿಕ ಯೋಗಕ್ಷೇಮವನ್ನು ಬೆಂಬಲಿಸಲು, ಆರೋಗ್ಯಕರ ಮನೆಯ ವಾತಾವರಣವನ್ನು ರೂಪಿಸಲು ಜ್ಞಾನ ಮತ್ತು ಪ್ರಾಯೋಗಿಕ ಮಾರ್ಗದರ್ಶನ ಒದಗಿಸಿತು

# ಪೋಷಕರ ಸಭೆ



ಕುಟುಂಬ ಪುನಃಸ್ಥಾಪನೆ ಮತ್ತು ಆರೈಕೆಯ ನಂತರದ ಪೋಷಕರ ಸಭೆ ಮತ್ತು ಪಡಿತರ ಕಿಟ್ ವಿತರಣಾ ಕಾರ್ಯಕ್ರಮವನ್ನು ಫೆಬ್ರವರಿ ೨೨ ರಂದು ಬೊಸ್ಕೊ ಯುವೋದಯದಲ್ಲಿ ಹಮ್ಮಿಕೊಳ್ಳಲಾಯಿತು. ಫಾ. ವರ್ಗೀಸ್ ಪಲ್ಲಿಪುರಂ ಸಭಿಕರನ್ನುದ್ದೇಶಿಸಿ ಮಾತನಾಡಿ, ಬೊಸ್ಕೊ ಅನುಷ್ಠಾನಗೊಳಿಸಿರುವ ವಿವಿಧ ಚಟುವಟಿಕೆ ಮತ್ತು ಕಾರ್ಯಕ್ರಮಗಳ ಬಗ್ಗೆ ವಿವರಿಸಿದರು. ಮಕ್ಕಳ ಆರೈಕೆ ಸಂಸ್ಥೆಗಳಲ್ಲಿ (ಸಿಸಿಐ) ಯಾವುದೇ ಮಗು ವಾಸಿಸದಂತೆ ನೋಡಿಕೊಳ್ಳುವುದು ಮತ್ತು ಪ್ರತಿ ಮಗುವೂ ಸುರಕ್ಷಿತ ಮತ್ತು ಪೋಷಣೆಯ ಕೌಟುಂಬಿಕ ಪರಿಸರದಲ್ಲಿ ಬೆಳೆಯುವುದನ್ನು ಖಚಿತಪಡಿಸಿಕೊಳ್ಳುವುದು ಪೋಷಕರ ಸಭೆಯ ಪ್ರಾಥಮಿಕ ಉದ್ದೇಶವಾಗಿದೆ ಎಂದು ಅವರು ವಿವರಿಸಿದರು.

ಪೋಷಕರ ಜವಾಬ್ದಾರಿಯನ್ನು ಒತ್ತಿ ಹೇಳಿದ ಅವರು, ಪೋಷಕರು ತಮ್ಮ ಮಕ್ಕಳ ಆರೈಕೆ ಮತ್ತು ಅಭಿವೃದ್ಧಿಯ ಸಕ್ರಿಯ ಮಾಲೀಕತ್ವವನ್ನು ತೆಗೆದುಕೊಳ್ಳಬೇಕೆಂದು ಒತ್ತಾಯಿಸಿದರು.

ಬೊಸ್ಕೊ ಯುವೋದಯದ ಶಿಕ್ಷಕಿ ಮತ್ತು ಪ್ರೇರಕಿ ಶ್ರೀಮತಿ ವಿನ್ನರಸಿ ಅವರು ಪೋಷಕರ ಪಾತ್ರ ಮತ್ತು ಜವಾಬ್ದಾರಿಗಳ ಬಗ್ಗೆ ಮಾತನಾಡಿದರು. ಮಕ್ಕಳಿಗೆ ತಮ್ಮ ಪೋಷಕರಿಂದ ಕಾಳಜಿ, ರಕ್ಷಣೆ ಮತ್ತು ಪ್ರೀತಿಯ ಅಗತ್ಯವಿದೆ ಮತ್ತು ಮನೆಯ ಪ್ರತಿಕೂಲ ವಾತಾವರಣವು ಮಗುವಿನ ನಡವಳಿಕೆ ಮತ್ತು ಬೆಳವಣಿಗೆಯ ಮೇಲೆ ಗಮನಾರ್ಹ ಪರಿಣಾಮ ಬರಬಹುದು ಎಂದು ಅವರು ಒತ್ತಿ ಹೇಳಿದರು. ತಮ್ಮ ಮಕ್ಕಳ ಶಾಲಾ ಪ್ರಗತಿಯನ್ನು ನಿಯಮಿತವಾಗಿ ಮೇಲ್ವಿಚಾರಣೆ ಮಾಡಲು, ಅವರ ನಡವಳಿಕೆಯನ್ನು ಗಮನಿಸಲು ಮತ್ತು ಶಿಕ್ಷಣಕ್ಕೆ ಆದ್ಯತೆ ನೀಡಲು ಅವರು ಪೋಷಕರನ್ನು ಪ್ರೋತ್ಸಾಹಿಸಿದರು. ಪೋಷಕರು ತಮ್ಮ ಮಕ್ಕಳಿಗೆ ಮಾದರಿಯಾಗಿ ಕಾರ್ಯ ನಿರ್ವಹಿಸಬೇಕು ಎಂದು ಅವರಿಗೆ ನೆನಪಿಸಿದರು. ಹೆಚ್ಚುವರಿಯಾಗಿ, ವಿವಿಧ ಸರ್ಕಾರಿ ಕಲ್ಯಾಣ ಯೋಜನೆಗಳು ಮತ್ತು ಸಾಮಾಜಿಕ ಹಕ್ಕುಗಳನ್ನು ಪಡೆಯಲು ಆಧಾರ್ ಕಾರ್ಡ್, ಮತದಾರರ ಗುರುತಿನ ಚೀಟಿ, ಪ್ಯಾನ್ ಕಾರ್ಡ್ ಮತ್ತು ಪಡಿತರ ಚೀಟಿಗಳನ್ನು ಪಡೆಯುವ ಮಹತ್ವವನ್ನು ಅವರು ಒತ್ತಿ ಹೇಳಿದರು.

ಕುಟುಂಬ ಪುನಃಸ್ಥಾಪನೆ ಮತ್ತು ಆರೈಕೆ ನಂತರದ ಯೋಜನೆಯ ಸಂಯೋಜಕರಾದ ಶ್ರೀ ಬಾಲರಾಜ್ ಸಭಿಕರನ್ನು ಸ್ವಾಗತಿಸಿದರು, ಮತ್ತು ಬೊಸ್ಕೊ ಯುವ ಕೇಂದ್ರದ ಶ್ರೀಮತಿ ವಿಮಲಾ ಅವರು ಧನ್ಯವಾದ ಅರ್ಪಿಸಿದರು. ಮೂವತ್ತು ಪೋಷಕರು ತಮ್ಮ ಮಕ್ಕಳೊಂದಿಗೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಬೊಸ್ಕೊ ಸುಮನಹಳ್ಳಿ ತರಬೇತುದಾರರಿಗೆ ಮನರಂಜನಾ ಪ್ರವಾಸ



ಸುಮನಹಳ್ಳಿಯ ಬೊಸ್ಕೊ ಲೈಫ್ ಸ್ಕಿಲ್ ಟ್ರೇನಿಂಗ್ ಸೆಂಟರ್‌ನ ವಿದ್ಯಾರ್ಥಿಗಳಿಗೂ ಮತ್ತು ಸಿಬ್ಬಂದಿಗಳಿಗೂ ಫೆಬ್ರವರಿ ೨೪ ರಂದು ಒಂದು ದಿನದ ಮನರಂಜನಾ ಮತ್ತು ಶೈಕ್ಷಣಿಕ ಪ್ರವಾಸವನ್ನು ಆಯೋಜಿಸಲಾಗಿತ್ತು. ಗಗನಚುಕ್ಕಿ ಜಲಪಾತ, ಭರಚುಕ್ಕಿ ಜಲಪಾತಗಳ ವಿಕ್ಷಣೆಯ ನಂತರ ತಲಕಾಡಿನ ಮರಳಿನ ಹಾಸಿಗೆಯ ನೀರಿನಲ್ಲಿ ಎಲ್ಲರೂ ಈಜಿ ನಲಿದಾಡಿದರು. ಒಟ್ಟು ನಲವತ್ತು ತರಬೇತುದಾರರು ಮತ್ತು ಸಿಬ್ಬಂದಿಗಳು ಪ್ರವಾಸದಲ್ಲಿ ಭಾಗವಹಿಸಿದ್ದರು. ವಿದ್ಯಾರ್ಥಿಗಳಿಗೆ ತರಗತಿಗೂ ಮಿಗಿಲಾಗಿ ಹೊಸ ಅನುಭವ ಉಣಿಸುವುದು, ವಿಶ್ರಾಂತಿ ಮತ್ತು ಮನರಂಜನೆಯನ್ನು ನೀಡಿ ಪ್ರಾಯೋಗಿಕ ಕಲಿಕೆಗೂ ಅವಕಾಶ ಕಲ್ಪಿಸಿ ಇವುಗಳ ಮೂಲಕ ಅವರ ಸಾಮಾಜಿಕ, ಸಾಂಸ್ಕೃತಿಕ ಮತ್ತು ವೈಯಕ್ತಿಕ ಅಭಿವೃದ್ಧಿಯನ್ನು ಬೆಂಬಲಿಸುವುದು ಈ ಪ್ರವಾಸದ ಸದುದ್ದೇಶವಾಗಿತ್ತು.

ಪ್ರಯಾಣದ ಸಮಯದಲ್ಲಿ, ತರಬೇತುದಾರರು ಉತ್ಸಾಹದಿಂದ ಹಾಡಿ, ನರ್ತಿಸಿ ಪರಸ್ಪರ ಸಂವಹನದಲ್ಲಿ ತೊಡಗಿಸಿಕೊಂಡು ಇಡೀ ಯಾತ್ರೆಯನ್ನು ಸಂಪೂರ್ಣವಾಗಿ ರಂಜಿಸಿದರು. ಗಗನಚುಕ್ಕಿ ಮತ್ತು ಭರಚುಕ್ಕಿ ಜಲಪಾತಗಳಲ್ಲಿನ ರಮಣೀಯ ಸೌಂದರ್ಯ, ಸೊಂಪಾದ ಹಸಿರು ಮತ್ತು ನೈಸರ್ಗಿಕ ಸುತ್ತಮುತ್ತಲಿನ ಪ್ರದೇಶಗಳನ್ನು ಕಣ್ತುಂಬಿಸಿಕೊಂಡರು. ಈ ಭೇಟಿಯು ಪ್ರಕೃತಿಯನ್ನು ರಕ್ಷಿಸುವ ಮತ್ತು ಪರಿಸರವನ್ನು ಸಂರಕ್ಷಿಸುವ ಮಹತ್ವದ ಬಗ್ಗೆ ತಿಳಿದುಕೊಳ್ಳುವ ಅವಕಾಶ ನೀಡಿತಲ್ಲದೆ ಶಾಂತ, ಉಲ್ಲಾಸದಾಯಕ ವಾತಾವರಣವನ್ನೂ ಅವರಿಗೆ ಕಲ್ಪಿಸಿಕೊಟ್ಟಿತು. ನಂತರ ತಂಡವು ತಲಕಾಡು ದೇವಾಲಯಕ್ಕೆ ಭೇಟಿ ನೀಡಿ ಅಲ್ಲಿ ಪ್ರಾರ್ಥನೆ ಸಲ್ಲಿಸಿದ ವಿದ್ಯಾರ್ಥಿಗಳು ನಂತರ ಪ್ರಕಾಶಪಾಳ್ಯದ ಡಾನ್ ಬೊಸ್ಕೊ ಸಂಸ್ಥೆಗೂ ಭೇಟಿ ನೀಡಿ ಅಲ್ಲಿನ ಸೊಗಸ್ಸನ್ನೂ ಸವಿದರು. ಈ ಅನುಭವದಿಂದ ಅವರಲ್ಲಿ ನಮ್ಮ ಸಂಪ್ರದಾಯ, ಪರಂಪರೆ ಮತ್ತು ಆಧ್ಯಾತ್ಮಿಕತೆಯ ಬಗ್ಗೆ ಹೆಚ್ಚಿನ ತಿಳುವಳಿಕೆ ಮೂಡಿತು.

# ಡಿಜಿಟಲ್ ಕಲಿಕಾ ದಿನ

ಫೆಬ್ರವರಿ ೨೩ರಂದು ಸುಮನಹಳ್ಳಿಯ ಬೊಸ್ಕೊ ಲೈಫ್ ಸ್ಕಿಲ್ ಟ್ರೈನಿಂಗ್ ಸೆಂಟರ್‌ನಲ್ಲಿನ ವಿದ್ಯಾರ್ಥಿಗಳು ಡಿಜಿಟಲ್ ಕಲಿಕಾ ದಿನವನ್ನು ಆಚರಿಸಿದರು. ಈ ಕಾರ್ಯಕ್ರಮದ ಮುಖೇನ ವಿದ್ಯಾರ್ಥಿಗಳು ಡಿಜಿಟಲ್ ಶಿಕ್ಷಣದ ಮಹತ್ವವನ್ನು ಅರಿತರಲ್ಲದೆ ಕಂಪ್ಯೂಟರ್ ಜ್ಞಾನ ಮತ್ತು ಡಿಜಿಟಲ್ ಕೌಶಲ್ಯಗಳ ಬಗ್ಗೆ ಇನ್ನೂ ಹೆಚ್ಚಿನ ತಿಳುವಳಿಕೆ ಪಡೆದರು.

ಇಂದಿನ ಆಧುನಿಕ ಮತ್ತು ತಂತ್ರಜ್ಞಾನ ಚಾಲಿತ ಜಗತ್ತಿನಲ್ಲಿ ಡಿಜಿಟಲ್ ಕಲಿಕೆಯ ಮಹತ್ವವನ್ನು ವಿವರಿಸುವ ಸಂಕ್ಷಿಪ್ತ ಪರಿಚಯದೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಶಿಕ್ಷಣ, ಕೌಶಲ್ಯ ಅಭಿವೃದ್ಧಿ ಮತ್ತು ಭವಿಷ್ಯದ ಉದ್ಯೋಗಾವಕಾಶಗಳಿಗಾಗಿ ಡಿಜಿಟಲ್ ಸಾಧನಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವಂತೆ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲಾಯಿತು. ಡಿಜಿಟಲ್ ಕೌಶಲ್ಯಗಳು ಹೇಗೆ ಆತ್ಮವಿಶ್ವಾಸವನ್ನು ಬೆಳೆಸುತ್ತವೆ, ಸ್ವಾತಂತ್ರ್ಯವನ್ನು ಉತ್ತೇಜಿಸುತ್ತವೆ ಮತ್ತು ವೈಯಕ್ತಿಕ ಬೆಳೆವಣಿಗೆಯನ್ನು ಬೆಂಬಲಿಸುತ್ತವೆ ಎಂಬುದರ ಕುರಿತು ಅವರಿಗೆ ಮನವರಿಕೆ ಮಾಡಿಸಲಾಯಿತು.



ಅಧಿವೇಶನದ ಸಮಯದಲ್ಲಿ ವಿದ್ಯಾರ್ಥಿಗಳು ಕಂಪ್ಯೂಟರ್ ಕಲಿಕೆಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಟೈಪಿಂಗ್, ಆನ್‌ಲೈನ್ ಕಲಿಕಾ ಸಾಮಗ್ರಿಗಳನ್ನು ಬ್ರೌಸ್ ಮಾಡುವುದು ಮತ್ತು ಅವರ ಒಟ್ಟಾರೆ ತಾಂತ್ರಿಕ ಜ್ಞಾನವನ್ನು ಸುಧಾರಿಸುವಂತಹ ಮೂಲಭೂತ ಮತ್ತು ಸುಧಾರಿತ ಡಿಜಿಟಲ್ ಕೌಶಲ್ಯಗಳನ್ನು ಅಭ್ಯಸಿಸಿದರು. ಈ ಅಧಿವೇಶನದ ನಿಮಿತ್ತ ವಿದ್ಯಾರ್ಥಿಗಳು ಶಿಕ್ಷಣ, ದೈನಂದಿನ ಜೀವನ ಮತ್ತು ವೃತ್ತಿ ಅಭಿವೃದ್ಧಿಯಲ್ಲಿ ತಂತ್ರಜ್ಞಾನದ ಪಾತ್ರವನ್ನು ಇನ್ನೂ ಹೆಚ್ಚಾಗಿ ಅರ್ಥೈಸಿಕೊಳ್ಳಲು ನೆರವಾಯಿತು.

# ಸಿಬ್ಬಂದಿ ಪೀಠಿಕಾ ತರಬೇತಿ

ಫೆಬ್ರವರಿ ೯ ರಂದು ಬೊಸ್ಕೊ ಸಂಸ್ಥೆಗೆ ಹೊಸದಾಗಿ ಆಯ್ಕೆಗೊಂಡ ಸಿಬ್ಬಂದಿಗಳಿಗೆ ಬೊಸ್ಕೊ ಯುವೋದಯದಲ್ಲಿ ಇಂಡಕ್ಷನ್ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಸಂಸ್ಥೆಯ ಕಾರ್ಯಕಾರಿ ನಿರ್ದೇಶಕರಾದ ಫಾ. ವರ್ಗೀಸ್ ಪಲ್ಲಿಪುರಂ ಅವರು ಬೊಸ್ಕೊ ಸಂಸ್ಥೆಯ ವಿವಿಧ ಸೇವಾ ಕಾರ್ಯ ಮತ್ತು ಚಟುವಟಿಕೆಗಳ ಬಗ್ಗೆ ಸವಿವರವಾಗಿ ತಿಳಿಸಿಕೊಟ್ಟರು. ಇದರೊಂದಿಗೆ ಸಂಸ್ಥೆಯ ದೂರದೃಷ್ಟಿ, ಸೇವಾನಿಯೋಗ ಮತ್ತು ವಿವಿಧ ಸೇವಾಕಾರ್ಯ ಮತ್ತು ಯೋಜನೆಗಳ ಬಗ್ಗೆಯೂ ಮಾಹಿತಿ ನೀಡಿದರು.

ತದನಂತರ ಸಂಪನ್ಮೂಲ ವ್ಯವಸ್ಥಾಪಕರಾದ ಪ್ರಶಾಂತ್‌ಮೂರ್ತಿರವರು ಮಕ್ಕಳ ರಕ್ಷಣಾ ನೀತಿ ಮತ್ತು ಮಾನವ ಸಂಪನ್ಮೂಲ ನೀತಿ ಕುರಿತು ಅಧಿವೇಶನ ನಡೆಸಿಕೊಟ್ಟರು. ಸುರಕ್ಷಿತ ಮತ್ತು ಮಕ್ಕಳ ಸ್ನೇಹಿ ವಾತಾವರಣವನ್ನು ಖಾತ್ರಿಪಡಿಸಿಕೊಳ್ಳಲು ಅಗತ್ಯವಾದ ಸಾಂಸ್ಥಿಕ ನೀತಿ, ಸಿಬ್ಬಂದಿಗಳ ಪಾತ್ರ, ನೈತಿಕ ನಡವಳಿಕೆ ಮತ್ತು ವಿವಿಧ ಕಾರ್ಯವಿಧಾನಗಳ ಬಗ್ಗೆ ಅವರು ಸವಿವರವಾಗಿ ತಿಳಿಸಿಕೊಟ್ಟರು.



ಶ್ರೀ ಶಿವಮಲ್ಲು ಮಕ್ಕಳ ಕಾನೂನು, ಮಕ್ಕಳ ಹಕ್ಕು ಮತ್ತು ಮಕ್ಕಳ ಕಲ್ಯಾಣ ಸಮಿತಿ ಕಾರ್ಯವಿಧಾನಗಳ ಕುರಿತು ಅಧಿವೇಶನ ನಡೆಸಿಕೊಟ್ಟರು. ಈ ಅಧಿವೇಶನದಲ್ಲಿ ಮಕ್ಕಳೊಂದಿಗೆ ಕೆಲಸ ಮಾಡುವಾಗ ತಿಳಿಯಬೇಕಾದ ಕಾನೂನು ಚೌಕಟ್ಟು, ಮಕ್ಕಳ ಹಕ್ಕುಗಳ ರಕ್ಷಣೆ ಮತ್ತು ಶಾಸನಬದ್ಧ ಕಾರ್ಯವಿಧಾನಳ ಬಗ್ಗೆಯೂ ತಿಳಿಸಿಕೊಟ್ಟರು.

ಬೊಸ್ಕೊ ಸುಮ್ಮನಹಳ್ಳಿಯ ನಿರ್ದೇಶಕರಾದ ಫಾದರ್ ಆನಂದ್‌ರವರು ಡಾನ್ ಬೊಸ್ಕೊರವರ ಶೈಕ್ಷಣಿಕ ಮತ್ತು ಮುನ್ನೆಚ್ಚರಿಕಾ ವಿಧಾನದ ಬಗ್ಗೆ ಅಧಿವೇಶನ ನಡೆಸಿಕೊಟ್ಟರು. ಗುಂಪು ಚಟುವಟಿಕೆ, ಗುಂಪುಚರ್ಚೆ, ಚಟುವಟಿಕೆ ಆಧಾರಿತ ಕಲಿಕೆ ಮತ್ತು ವ್ಯಕ್ತಿತ್ವ ಅಭಿವೃದ್ಧಿಗೆ ಸಂಬಂಧಿಸಿದ ವೀಡಿಯೊ ತುಣುಕುಗಳ ಮೂಲಕ, ಮಕ್ಕಳೊಂದಿಗೆ ನಯವಿನಯದಿಂದ ನಡೆದುಕೊಳ್ಳಬೇಕಾದ ರೀತಿ-ನೀತಿಗಳ ಬಗ್ಗೆ ತಿಳಿಸಿಕೊಟ್ಟ.

# ಬೊಸ್ಕೊ ಸಿಬ್ಬಂದಿ ಕ್ರೀಡೋತ್ಸವ ೨೦೨೬

ಫೆಬ್ರವರಿ ೨೧ ರಂದು ಬೆಂಗಳೂರಿನ ಬೊಸ್ಕೊ ಸುಮನಹಳ್ಳಿಯಲ್ಲಿ ಬೊಸ್ಕೊ ಸಿಬ್ಬಂದಿಗಾಗಿ ಕ್ರೀಡೋತ್ಸವವನ್ನು ಆಯೋಜಿಸಲಾಗಿತ್ತು. ಈ ಕ್ರೀಡೋತ್ಸವದಲ್ಲಿ ಬೊಸ್ಕೊ ಸಂಸ್ಥೆಯ ನಿರ್ದೇಶಕರು ಹಾಗೂ ಬಹುತೇಕ ಸಿಬ್ಬಂದಿಗಳು ಬಲು ಉತ್ಸಾಹದಿಂದ ಭಾಗವಿಸಿದರು.

ಈ ಕ್ರೀಡೋತ್ಸವದಲ್ಲಿ ಭಾಗವಹಿಸಲು ಆಗಮಿಸಿದ್ದ ಎಲ್ಲರನ್ನೂ ಉದ್ದೇಶಿಸಿ ಬೊಸ್ಕೊ ಸಂಸ್ಥೆಯ ಕಾರ್ಯಕಾರಿ ನಿರ್ದೇಶಕರಾದ ಫಾ. ವರ್ಗೀಸ್ ಪಲ್ಲಿಪುರಂರವರು ಮಾತನ್ನಾಡುತ್ತಾ ಬೊಸ್ಕೊ ಸಿಬ್ಬಂದಿಗಳಿಗೆ ಇಡೀ ವರುಷ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರೂ ಬೊಸ್ಕೊ ಕ್ರೀಡೋತ್ಸವ ಎಲ್ಲಾ ಸಿಬ್ಬಂದಿಗಳಿಗೂ ಒಂದು ವಿಶೇಷ ದಿನ, ಎಲ್ಲಾ ಸಿಬ್ಬಂದಿಗಳನ್ನು ಒಗ್ಗೂಡಿಸಲು, ಪರಸ್ಪರ ಪ್ರೋತ್ಸಾಹಿಸಲು, ಸ್ನೇಹಯುತವಾಗಿ ಕ್ರೀಡೆಯಲ್ಲಿ ಭಾಗವಹಿಸಲು ಸಂದಿರುವ ಸೌಭಾಗ್ಯವೆಂದು ಬಣ್ಣಿಸಿದರು. ಇದೊಂದು ಕುಟುಂಬ-ಆಧಾರಿತ ಕಾರ್ಯಕ್ರಮವೆಂದು ಒತ್ತಿ ಹೇಳಿದರು.






ಬೆಳಗಿನ ಅಧಿವೇಶನವು ಪುರುಷ ಸಿಬ್ಬಂದಿಗೆ ಕ್ರಿಕೆಟ್ ಮತ್ತು ಮಹಿಳಾ ಸಿಬ್ಬಂದಿಗೆ ಬ್ಲಾಂಕೆಟ್ ಥ್ರೋಬಾಲ್ ಜೊತೆಗೆ ಮನರಂಜನೆಯ ನೃತ್ಯ ಸ್ಪರ್ಧೆಯೂ ಇತ್ತು. ಮಧ್ಯಾಹ್ನದಲ್ಲಿ ಕೆಲವು ಮನರಂಜನಾ ಆಟೋಟಗಳ ಜೊತೆಗೆ ಪುರಷರಿಗೆ ವಾಲಿಬಾಲ್, ಮಹಿಳೆಯರಿಗೆ ಥ್ರೋಬಾಲ್ ಮತ್ತು ಎರಡೂ ಗುಂಪುಗಳಿಗೂ ಹಗ್ಗಜಗ್ಗಾಟ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಎಲ್ಲರೂ ಅತ್ಯಂತ ಉತ್ಸಕತೆಯಿಂದ ಸ್ಪರ್ಧೆಗಳಲ್ಲಿ ಭಾಗವಹಿಸಿದರು.

ಭಾಗವಹಿಸುವಿಕೆ, ಕ್ರೀಡಾ ಮನೋಭಾವ ಮತ್ತು ಗೆಲುವನ್ನು ಆಧರಿಸಿ ವಿಜೇತರಿಗೆ ಬಹುಮಾನ ಮತ್ತು ರೋಲಿಂಗ್ ಕಪ್ ವಿತರಣೆ ಮಾಡಲಾಯಿತು. ಬೊಸ್ಕೊ ಸುಮನಹಳ್ಳಿಯ ನಿರ್ದೇಶಕರಾದ ಫಾ. ಆನಂದ್ ಸಭಿಕರನ್ನು ಸ್ವಾಗತಿಸಿದರು ಹಾಗೂ ಕೊನೆಗೆ ಧನ್ಯವಾದ ಅರ್ಪಿಸಿದರು. ಬೊಸ್ಕೊ ಸಿಬ್ಬಂದಿಗಳಿಗೆ ಇದೊಂದು ಸ್ಮರಣೀಯ ಕ್ರೀಡೋತ್ಸವವಾಗಿತ್ತು.

# BOSCO Homelink February - 2026

| | Male | Female | Total |
|---|---|---|---|
| Children rescued | 104 | 34 | 138 |
| Service provided | 42 | 12 | 54 |
| Grand Total | 146 | 46 | 192 |

**New Children Data of Contact Center/Area:**

| | Fresh | | Repeated | | |
|---|---|---|---|---|---|
| Contact Point | Boys | Girls | Boys | Girls | Total |
| Railway Station DCPU Staff | 20 | 12 | 00 | 00 | 32 |
| Bus Stand BMTC | 24 | 05 | 00 | 00 | 29 |
| Bus Stand KSRTC | 11 | 01 | 01 | 00 | 13 |
| BOSCO Yuvodaya | 03 | 00 | 00 | 00 | 03 |
| BOSCO Yuvakendra | 03 | 00 | 00 | 00 | 03 |
| BOSCO Nivas | 02 | 01 | 00 | 00 | 03 |
| BOSCO Nilaya | 11 | 00 | 00 | 00 | 11 |
| BOSCO Vatsalya Bhavan | 00 | 01 | 00 | 02 | 03 |
| CSN | 05 | 01 | 00 | 00 | 06 |
| SMVT | 07 | 02 | 00 | 00 | 09 |
| BNC | 09 | 03 | 00 | 00 | 12 |
| KJM | 07 | 06 | 00 | 00 | 13 |
| Juvenile Advocacy | 01 | 00 | 00 | 00 | 01 |
| TOTAL | 103 | 32 | 01 | 02 | 138 |

**Final Action Taken**

| Placement | Boys | Girls | Total |
|---|---|---|---|
| Under Follow-up in BOSCO Centres | 23 | 06 | 29 |
| Home Placement (CWC R) | 45 | 17 | 62 |
| Direct Home Placement | 23 | 02 | 25 |
| Admission to Government Homes | 13 | 08 | 21 |
| Accompanied Home Placement | 00 | 01 | 01 |
| TOTAL | 104 | 34 | 138 |

## Stay Connected with BOSCO

BOSCO
Bangalore Oniyavara Seva Coota

/BOSCOBENGALURU